



# ಫರ್ನ್ ಮೌಂಟಿಂಗ್

## ಆಧುನಿಕ ಗಾರ್ಡನಿಂಗ್ ಹೊಸ ರೂಪ

**ಆಧುನಿಕ ಗಾರ್ಡನಿಂಗ್ ವಿಧಾನದಲ್ಲಿ 'ಫರ್ನ್ ಮೌಂಟಿಂಗ್' ಹೊಸ ಪರಿಕಲ್ಪನೆಯಾಗಿ ಒಡಮೂಡಿದೆ. ಮರದ ಹಲಗೆಗೆ ಜರೀಗಿಡಗಳನ್ನು ಆಳವಡಿಸಿ ತೂಗು ಹಾಕುವ ಈ ಕಲೆ ಮನೆ ಒಳಾಂಗಣಕ್ಕೂ ಕಳೆ ನೀಡಬಲ್ಲದು.**

**■ ಸೀಮಾ ಹೆಗಡೆ**

ಕೋಟ್ಯಂತರ ವರ್ಷಗಳ ಹಿಂದೆ ಜಲವಾಸಿಯಾಗಿದ್ದ ಕೆಲ ಜೀವಿಗಳು ನಿಧಾನಕ್ಕೆ ನೆಲದೆಡೆ ನಡೆಯುತ್ತಾ ಬೇರು, ನಾಳ, ಅಂಗಾಂಗಗಳನ್ನು ಹೊಂದಿ ಎತ್ತರದ ಮರವಾಗಿ ರೂಪುಗೊಂಡಿದ್ದು ಕೌತುಕದ ಸಂಗತಿ. ಹಾವಸೆಗಳಿಂದ ಶುರುವಾಗಿ ಹೂ ಬಿಡುವವರೆಗೆ ಸಸ್ಯ ಸಾಮ್ರಾಜ್ಯ ವಿಕಸನವಾದ ಹಾದಿಯಲ್ಲಿ ಹಲವಾರು ಮೈಲಿಗಲ್ಲುಗಳಿವೆ. ಅವುಗಳಲ್ಲಿ ಮುಖ್ಯವಾದದ್ದು 'ಜರೀಗಿಡಗಳು' ಅಥವಾ 'ಫರ್ನ್'ಗಳ ಉಗಮ.

ನೆಲಕ್ಕೆ ತಗುಲಿಯೇ ಬೆಳೆಯುತ್ತಿದ್ದ ಪಾಚಿಗಳ ಕುಟುಂಬ ಬೇರು ಹರಡಿಸಿ, ನೀರು–ಆಹಾರ ಸರಬರಾಜು ಮಾಡಲು, ಬೀಜ ಬಿಡಲು ಕಲಿತದ್ದು ಇದೇ 'ಜರೀಗಿಡ'ಗಳೆಂಬ ಆವೃತ್ತಿ ಮೂಲಕ. ಬೇರನ್ನು ಹೋಲುವ ಹುಸಿಬೇರು (ರೈಝೋಮ್), ಬೀಜಗಳನ್ನು ಹೋಲುವ ಬೀಜಕಗಳನ್ನು (ಸ್ಪೋರ್) ಒಳಗೊಂಡ ಜರೀಗಿಡಗಳು ಒಂದು ಕಾಲದಲ್ಲಿ ಭೂಮಂಡಲವನ್ನಾಳಿದ ಜೀವಿಗಳು. ಇದರ ಹಲವು ಜಾತಿಗಳು ನಶಿಸಿಹೋಗಿ ಉಳಿದವು ಮಳೆಕಾಡಿನ ಮರಗಳನ್ನು ಆಶ್ರಯಿಸಿದರೆ, ಕೆಲವು ಸಸ್ಯಪ್ರೇಮಿಗಳ ಮನೆ ಸೇರಿ ಒಳಾಂಗಣದಲ್ಲಿ, ಉದ್ಯಾನದಲ್ಲಿ ಜಾಗ ಪಡೆದಿವೆ.

ಉಷ್ಣವಲಯದ ಕಾಡಿನ ಮರಗಳ ರೆಂಬೆ ಕೊಂಬೆಗಳನ್ನು ತನ್ನ ಹುಸಿ ಬೇರುಗಳಿಂದ ಅಪ್ಪಿ ಬೆಳೆಯುವುದು ಜರೀಗಿಡಗಳ ನೈಸರ್ಗಿಕ ಸ್ವಭಾವ. 'ಎಪಿಫೈಟ್ಸ್' ಎಂದು ಕರೆಯಲಾಗುವ ಈ ಸಸ್ಯಗಳು ಕೇವಲ ಆಧಾರಕ್ಕಾಗಿ ಮರವನ್ನು ಅವಲಂಬಿಸಿರುತ್ತವೆ; ತೇವಾಂಶವನ್ನು ಮಳೆ–ಗಾಳಿಯಿಂದಲೂ, ಪೋಷಕಾಂಶಗಳನ್ನು ತನ್ನ ಸುತ್ತ ಕಟ್ಟಿದ ಕಸ–ಕಡ್ಡಿಗಳಿಂದ ಪಡೆಯುತ್ತವೆ; ಇಂತಹ ಜರೀಗಿಡಗಳನ್ನು ಒಳಾಂಗಣದಲ್ಲಿ ಬೆಳೆಸುವುದು ಹಲವರ ಖಯಾಲಿ.

ಕೊಚ್ಚು ಎಲೆಗಳ 'ಬೋಸ್ಟೋನ್ ಫರ್ನ್', ಹಕ್ಕಿ ಗೂಡಿನಂತೆ ಕಾಣುವ 'ಬರ್ಡ್ಸ್ ನೆಸ್ಟ್ ಫರ್ನ್', ಕೂದಲು ಇಳಿಬಿಟ್ಟಂತೆ ಕಾಣುವ 'ಮೇಡನ್ ಹೇರ್ ಫರ್ನ್', ಸಾರಂಗದ ಕೊಂಬುಗಳಂತೆ ಕವಲೊಡೆದ 'ಸ್ಟಾಗ್ ಹಾರ್ನ್ ಫರ್ನ್', ನಾಣ್ಯದ ಹಾರದಂತೆ ಕಾಣುವ 'ಬಟನ್ ಫರ್ನ್', ಹೀಗೆ ಅಲಂಕಾರಿಕವಾಗಿ ಬಳಸಲಾಗುತ್ತಿರುವ ಹಲವಾರು ಫರ್ನ್ ಜಾತಿಯ ಸಸ್ಯಗಳಿವೆ.

ಹೂಕುಂಡದಲ್ಲೋ ತೂಗುಕುಂಡದಲ್ಲೋ ಬೆಳೆಸುವುದಕ್ಕಿಂತ ಅವುಗಳ ವಾಸಸ್ಥಾನವನ್ನೇ ಅನುಸರಿಸಿ, ಮರದ ಹಲಗೆಗೆ ಅಥವಾ ರೆಂಬೆಯಂತಹ ಕಟ್ಟಿಗೆ ಚೂರಿನ ಮೇಲೆ ಬೆಳೆಸುವುದು ನೈಸರ್ಗಿಕ ನೋಟ ನೀಡುವುದರ ಜೊತೆ ಅವುಗಳ ಬೆಳವಣಿಗೆಗೂ ಸಹಕಾರಿಯಾಗಬಲ್ಲದು. ಇದೇ ವಿಧಾನವನ್ನು ಆಧುನಿಕ ಗಾರ್ಡನಿಂಗ್ ಭಾಷೆಯಲ್ಲಿ 'ಫರ್ನ್ ಮೌಂಟಿಂಗ್' ಎಂದು ಕರೆಯಲಾಗುತ್ತದೆ.

### ಫರ್ನ್ ಮೌಂಟಿಂಗ್ ಹೇಗೆ?

ಮರದ ಹಲಗೆಯ ಅಂಚಲ್ಲಿ ಮೊದಲು ನಾಲ್ಕಾರು ಕಡೆ ಮೊಳೆ ಹೊಡೆಯಬೇಕು. ಜರೀಗಿಡವನ್ನು ಬೇರು ಸಮೇತ ಗೋಲವಾಗಿಸಿ ಹಲಗೆಯ ಮೇಲಿರಿಸಿ ಸ್ಫಾಗ್ನಮ್ ಮಾಸ್ ಅಥವಾ ಕೋಕೋಪಿಟ್‌ನಿಂದ ಮುಚ್ಚಬೇಕು; ಮೊಳೆಗಳ ಮೂಲಕ ಸೆಣಬಿನ ದಾರವನ್ನು ಗಿಡದ ಬುಡದ ಮೇಲೆ ಬಿಗಿಯಾಗಿ ಹಾಯಿಸಿ ಗಿಡವನ್ನು ಹಲಗೆಗೆ ಭದ್ರಪಡಿಸಬೇಕು.

ಹೀಗೆ ಮೌಂಟ್ ಮಾಡಿದ ಜರೀಗಿಡವನ್ನು ಪೇಂಟಿಂಗ್‌ನಂತೆ ನೇತುಹಾಕಿದರೆ ಮನೆ ಇನ್ನಷ್ಟು ಸುಂದರ. ಜರೀಗಿಡಗಳನ್ನಷ್ಟೇ ಅಲ್ಲದೇ ಇತರ ಎಪಿಫೈಟ್‌ಗಳಾದ ಆರ್ಕಿಡ್, ಬ್ರೊಮಿಲಿಡ್ಸ್, ತಿಲಾಂಡ್ಸಿಯಾಗಳನ್ನು ಈ ರೀತಿ ಮೌಂಟ್ ಮಾಡಿ ಬೆಳೆಸಬಹುದು.

ಮಣ್ಣಿಗಿಂತ ಹೆಚ್ಚಾಗಿ ಇತರೆ ಆಧಾರವಾದ ಮರದ ತೊಗಟೆ, ಹಸಿಯಾಗಿರುವ ಕಲ್ಲು ಬಂಡೆ ಜರೀಗಿಡಗಳ ನೆಚ್ಚಿನ ವಾಸಸ್ಥಾನ. ಹಾಗಾಗಿ ಸುಲಭವಾಗಿ ಸಿಕ್ಕಬಲ್ಲ ಯಾವುದೇ ಮರದ ಹಲಗೆ ಮೌಂಟಿಂಗ್‌ಗೆ ಉಪಯೋಗವಾಗಬಲ್ಲದು. ಜರೀಗಿಡಗಳ ಬೇರು ಆಳವಾಗಿ ಬೆಳೆಯದ, ಕೂದಲಿನಂತೆ ಹಲವಾರು ಮೃದು ಎಳೆಗಳುಳ್ಳ ಸೂಕ್ಷ್ಮವಾದ ರಚನೆ. ಮಣ್ಣಿಗಿಂತಲೂ ಹಾವಸೆಗಳನ್ನು ಅನುಕರಿಸುವ, ಹೆಚ್ಚು ನೀರನ್ನು ಉಳಿಸಿಕೊಳ್ಳುವ ಸ್ಫಾಗ್ನಮ್ ಮಾಸ್ ಅಥವಾ ತೆಂಗಿನ ನಾರಿನ ಕೋಕೋಪಿಟ್ ಅವುಗಳ ಬೇರಿನ ಹರಡುವಿಕೆ, ಬೆಳವಣಿಗೆಗೆ ಸಹಕಾರಿಯಾಗಬಲ್ಲದು.

ಹೀಗೆ ಮೌಂಟ್ ಮಾಡಿದ ಫರ್ನ್‌ನ ನೀರು–ಬೆಳಕಿನ ನಿರ್ವಹಣೆ ಸುಲಭದ್ದು. ಹೆಚ್ಚು ಮಳೆ ಬೀಳುವ, ಸದಾ ತೇವವಾಗಿರುವ, ಮರದ ನೆರಳಿನಲ್ಲಿ ಬೆಳೆಯುವ ಫರ್ನ್‌ಗಳಿಗೆ ಒಳಾಂಗಣದಲ್ಲೂ ಅದೇ ರೀತಿಯ ವಾತಾವರಣ ನಿರ್ಮಿಸುವುದು ಅಗತ್ಯ. ಕಿಟಕಿ ಬದಿಯ ನೆರಳು (ಪ್ರಕಾಶಮಾನವಾದ ಪರೋಕ್ಷ ಬೆಳಕು) ಬೀಳುವ ಜಾಗ ಫರ್ನ್‌ಗಳಿಗೆ ಹೆಚ್ಚು ಸೂಕ್ತ. ಹೆಚ್ಚು ಆರ್ದ್ರತೆ ಬಯಸುವ ಫರ್ನ್‌ಗಳಿಗೆ ನೀರಿನ ಸಿಂಪಡಣೆ, ವಾರಕ್ಕೊಮ್ಮೆ ನೀರಿನಲ್ಲಿ ಪೂರ್ತಿ ಅದ್ದಿ ತೆಗೆಯುವ ಅಭ್ಯಾಸ ಒಳ್ಳೆಯದು. ಆಗಾಗ ನೀರು ಕೊಡಲು ಮರೆತರೂ ಹೆಚ್ಚು ಸಮಸ್ಯೆಯಿಲ್ಲ, ಸ್ವಲ್ಪ ಮಟ್ಟಿಗೆ ನೀರಿನ ಒತ್ತಡವನ್ನು ಅವು ತಾಳಿಕೊಳ್ಳಬಲ್ಲವು.

ಮರದ ಹಲಗೆಗೆ ಜರೀಗಿಡಗಳನ್ನು ಮೌಂಟ್ ಮಾಡಿ ತೂಗು ಹಾಕುವ ಈ ಕಲೆ ಮನೆ ಒಳಾಂಗಣಕ್ಕೂ ಕಳೆ ನೀಡಬಲ್ಲದು. ಹೀಗೆ ಫರ್ನ್ ಮೌಂಟಿಂಗ್ ಎಂಬ ವಿಶಿಷ್ಟ ಚಟುವಟಿಕೆಯನ್ನು ಅನುಸರಿಸಿ ಮನೆಯನ್ನು ಹಸುರಾಗಿಸಬಹುದು. ■